ವಿಷಯ :- ಇಂಡಿ ಮತ ಕ್ಷೇತ್ರದಲ್ಲಿ ವಿದ್ಯುಚ್ಛಕ್ತಿ ಮಂಡಳಿಯ ಉಪವಿಭಾಗ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 954 (1491)

ಶ್ರೀ ರವಿಕಾಂತ್ ಎಸ್. ಪಾಟೀಲ್ (ಇಂಡಿ) :- ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಇಂಡಿ ಮತ ಕ್ಷೇತ್ರದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಉಪವಿಭಾಗ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಇಂಡಿ ಮತ ಕ್ಷೇತ್ರದಲ್ಲಿ ಬರುವಂತಹ ಹಳ್ಳಿಗಳಿಗೆ ವಿದ್ಯುತ್ ಸರಬರಾಜು ಆಗದೆ ಹಳ್ಳಿಗಳಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ವಿದ್ಯುತ್ ಸರಬರಾಜು ಸರಿಯಾಗಿ ಆಗಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಈ) 1996-97 ನೇ ಹಣಕಾಸು ವರ್ಷದಲ್ಲಿ ಇಂಡಿ ಪಟ್ಟಣಕ್ಕೆ ವಿದ್ಯುತ್ ಸರಬರಾಜು ಮಾಡುವ ಡೀಸೆಲ್ ಘಟಕವನ್ನು ಸ್ಥಾಪಿಸಲಾಗುವುದೇ?

ಉ) ಇದಕ್ಕೆ ತಗಲುವಂತಹ ಹಣಕಾಸು ವೆಚ್ಚವನ್ನು 1996-97 ನೇ ಸಾಲಿನಲ್ಲಿ ಭರಿಸಲು ಉದ್ದೇಶಿಸಲಾಗಿದೆಯೆ?

ಶ್ರೀ ಶರಣಪ್ಪ ಬಸಪ್ಪ ದರ್ಶಾನಪುರ್ (ಇಂಧನ ರಾಜ್ಯ ಸಚಿವರು) :-

ಅ) ಹೌದು.

ಆ) ಹೌದು, ಬಂದಿದೆ.

ಇ) ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1) ಝಳಕಿಯಲ್ಲಿ ಹಾಲಿ ಇರುವ 33 ಕೆವಿ ವಿದ್ಯುತ್ ಉಪ ಕೇಂದ್ರವನ್ನು 110 ಕೆವಿ ವಿದ್ಯುತ್ ಉಪ ಕೇಂದ್ರವನ್ನಾಗಿ ಮೇಲ್ದರ್ಜೆಗೊಳಿಸಲಾಗುವುದು.

2) ಹೊರ್ತಿ ಗ್ರಾಮದಲ್ಲಿ ಒಂದು 33 ಕೆವಿ ವಿದ್ಯುತ್ ಉಪ ಕೇಂದ್ರವನ್ನು ನಿರ್ಮಾಣ ಮಾಡಲಾಗುವುದು.

3) ಧೂಳಖೇಡ್ ಮತ್ತು ನಿವರ್ಗಿ ಗ್ರಾಮಗಳಲ್ಲಿ 33 ಕೆ.ವಿ. ವಿದ್ಯುತ್ ಉಪ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಿದೆ.

ಇ) ಇಂಡಿ ಪಟ್ಟಣದಲ್ಲಿ ಖಾಸಗೀ ವಲಯದಲ್ಲಿ ಬಹು ಅನಿಲ ಆಧಾರಿತ (ಮಲ್ಟಿ ಫ್ಯೂಯಲ್ ಬೇಸ್ಡ್) ವಿದ್ಯುತ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ತೀರ್ಮಾನಿಸಲಾಗಿದೆ. ಸರ್ಕಾರವು ದಿನಾಂಕ : 15-11-95 ರ ಆದೇಶದ ಮೂಲಕ ಮೆ: ಹೆಚ್‌ಎಮ್‌ಟಿ (ಇಂಡಿ) ಲಿಮಿಟೆಡ್ ಕಂಪೆನಿಗೆ 100 ಮೆಗಾವಾಟ್ಸ್ ಸಾಮರ್ಥ್ಯದ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ಇಂಡಿ ಪಟ್ಟಣದಲ್ಲಿ ಸ್ಥಾಪಿಸಲು ಅನುಮತಿ ನೀಡಿದೆ. ಅಲ್ಲದೇ ಸರ್ಕಾರವು ದಿನಾಂಕ : 31-5-96 ರ ಆದೇಶದ ಮೂಲಕ ಮೆ: ರಾಯಲಸೀಮೆ ಅಲ್ಕಲೀಸ್ ಅಂಡ್ ಅಲೈಡ್ ಕೆಮಿಕಲ್ಸ್ ಕಂಪೆನಿಗೆ ಇಂಡಿ ಪಟ್ಟಣದಲ್ಲಿ 27.8 ಮೆಗಾವಾಟ್ಸ್ ಸಾಮರ್ಥ್ಯದ ವಿದ್ಯುತ್ ಉತ್ಪಾದನಾ ಘಟಕವನ್ನು ಸ್ಥಾಪಿಸಲು ಅನುಮತಿ ನೀಡಿದೆ. ಸದರೀ ಕಂಪನಿಗಳು ನಿರ್ಮಾಣಕಾರ್ಯಗಳನ್ನು ಇನ್ನೂ ಕೈಗೊಳ್ಳಬೇಕಾಗಿರುವುದರಿಂದ, 1996-97 ರ ಹಣಕಾಸು ವರ್ಷದಲ್ಲಿ ಈ ವಿದ್ಯುತ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಸಾಧ್ಯವಿಲ್ಲ.

ಉ) ಈ ಮೇಲ್ಕಂಡ ವಿದ್ಯುತ್ ಉತ್ಪಾದನಾ ಯೋಜನೆಗಳನ್ನು ಖಾಸಗೀ ವಲಯದಲ್ಲಿ "ಬಿಲ್ಡ್-ಓನ್-ಆಪರೇಟ್" ಆಧಾರದಲ್ಲಿ ಸ್ಥಾಪನೆ ಮಾಡಲಾಗುವುದರಿಂದ ಹಣಕಾಸು ವೆಚ್ಚವನ್ನು ಭರಿಸುವ ಪ್ರಶ್ನೆಯು ಉದ್ಭವಿಸುವುದಿಲ್ಲ.

ವಿಷಯ :- ಬೆಂಗಳೂರು ನಗರದಲ್ಲಿರುವ ನಕಲಿ ಪಡಿತರ ಚೀಟಿಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 955 (973)

ಶ್ರೀ ಎನ್. ರಾಜಣ್ಣ (ಭಾರತೀನಗರ) :- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ನಕಲಿ ಪಡಿತರ ಚೀಟಿಗಳನ್ನು ಕಂಡು ಹಿಡಿಯುವ ಬಗ್ಗೆ ಸಮೀಕ್ಷೆ ನಡೆಸಲಾಗಿದೆಯೇ ;

ಆ) ಹಾಗಿದ್ದಲ್ಲಿ, ಬೆಂಗಳೂರು ನಗರದಲ್ಲಿರುವ ನಕಲಿ ಪಡಿತರ ಚೀಟಿಗಳ ಅಂದಾಜು ಸಂಖ್ಯೆ ಎಷ್ಟು ;

ಇ) ಈ ಎಲ್ಲಾ ನಕಲಿ ಪಡಿತರ ಚೀಟಿಗಳನ್ನು ಕಂಡು ಹಿಡಿಯಲು ಕೈಗೊಳ್ಳಲಾಗುವ ಕ್ರಮಗಳೇನು ;

ಈ) ನಕಲಿ ಪಡಿತರ ಚೀಟಿಗಳನ್ನು ನಾಶಗೊಳಿಸುವ ಬಗ್ಗೆ ಕಾರ್ಡುಗಳ ಮಾದರಿಯನ್ನು ಬದಲಾಯಿಸುವ ಪ್ರಸ್ತಾವನೆ ಇದೆಯೇ ;

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :-

ಅ) ಇಲ್ಲ.